# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.53/2025

ಪಿರ್ಯಾದಿಃ ರಾಣೇಬೆನ್ನೂರು ಗ್ರಾಮೀಣ ಪೊಲೀಸ್ ಠಾಣೆ

**ವಿರುದ್ಧ**

ಆರೋಪಿತರುಃ
1. ನಿಂಗಪ್ಪ ಬಸವಂತಪ್ಪ ಹೊಳಲ
ವಯಾಃ 32 ವರ್ಷ
2. ವಿಜಯಕುಮಾರ ಬಸವಂತಪ್ಪ ಹೊಳಲ
ವಯಾಃ 35 ವರ್ಷ
3. ಶಿವಕುಮಾರ ಚನ್ನಬಸಪ್ಪ ಹೊಳಲ
ವಯಾಃ 32 ವರ್ಷ
4. ಶಂಭುಲಿಂಗ ಚನ್ನಬಸಪ್ಪ ಹೊಳಲ
ವಯಾಃ 30 ವರ್ಷ
5. ರುದ್ರಪ್ಪ ನಾಗಪ್ಪ ಹೊಳಲ
ವಯಾಃ 30 ವರ್ಷ
6. ನಾಗಪ್ಪ ರುದ್ರಪ್ಪ ಹೊಳಲ
ವಯಾಃ 59 ವರ್ಷ

ಎಲ್ಲರೂ ಸಾಃ ವೈ.ಟಿ. ಹೊನ್ನತ್ತಿ, ತಾಃ ರಾಣೇಬೆನ್ನೂರು

**ದೋಷಾರೋಪಣೆ**

ಶ್ರೀ ಎನ್.ಎಂ. ರಮೇಶ, ಬಿ.ಕಾಂ. ಎಲ್.ಎಲ್.ಬಿ., ಎಲ್.ಎಲ್.ಎಂ. ಹಾವೇರಿಯ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಎಂಬ ನಾನು ಆರೋಪಿತರಾದ ನಿಮ್ಮ ಮೇಲೆ ಈ ಕೆಳಕಂಡಂತೆ ಹೊರಿಸುವ ದೋಷಾರೋಪಣೆಗಳೇನೆಂದರೆ,

1. ದಿನಾಂಕಃ20.06.2025 ರಂದು ವೈ.ಟಿ ಹೊನ್ನತ್ತಿ ಗ್ರಾಮದ ಪಂಚಾಯತಿ ಹೊಸ ಕಟ್ಟಡದ 1ನೇ ಹಂತದ ಕಾಮಗಾರಿಗೆ ಲೈನ್ ಔಟ್ ಹಾಕುವ ಕೂಲಿ ಕೆಲಸಕ್ಕೆ ಪಿರ್ಯಾದಿ, ಚಾಸಾ-4 ಮತ್ತು 5ನೇ ರವರಿಗೆ ಚಾಸಾ-9 ರವರು ಅಳತೆ ಮಾಡಿ ಎಂದು ಹೇಳಿದಂತೆ ಲೈನ್ ಔಟ್ ಹಾಕಿಸುತ್ತಿದ್ದಾಗ ಆರೋಪಿತರಾದ ನೀವೆಲ್ಲರೂ ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪುಕಟ್ಟಿಕೊಂಡು ಬಂದು ಅವರ ಜೊತೆ ಜಗಳ ತೆಗೆದಿದ್ದು, ಆ ಮೂಲಕ ಆರೋಪಿತರಾದ ನೀವೆಲ್ಲರೂ ಬಿ.ಎನ್.ಎಸ್-2023 ಕಲಂ.189(2) ಸಹ ಕಲಂ 190 ರಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

2. ಎರಡನೇಯದಾಗಿ ಮೇಲೆ ಹೇಳಿದ ತಾರೀಖು, ವೇಳೆ, ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪುಕಟ್ಟಿಕೊಂಡು ಬಂದು ಚಾಸಾ-1, 4 ಮತ್ತು 5 ರವರ ಜೊತೆ ಜಗಳ ತೆಗೆದು ದೊಂಬಿ ಎಬ್ಬಿಸಿದ್ದು, ಆ ಮೂಲಕ ಆರೋಪಿತರಾದ ನೀವೆಲ್ಲರೂ ಬಿ.ಎನ್.ಎಸ್-2023 ಕಲಂ 191(2) ಸಹ ಕಲಂ 190 ರಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

3. ಮೂರನೇಯದಾಗಿ ಮೇಲೆ ಹೇಳಿದ ತಾರೀಖು, ವೇಳೆ, ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪುಕಟ್ಟಿಕೊಂಡು ಬಂದು ಚಾಸಾ-1, 4 ಮತ್ತು 5 ರವರ ಜೊತೆ ಜಗಳ ತೆಗೆದು, 1 ಮತ್ತು 2 ನೇ ಆರೋಪಿತರಾದ ನೀವು ಚಾಸಾ-1 ರವರಿಗೆ ಕೈಯಿಂದ ಹೊಡೆದು ಸಾಮಾನ್ಯ ಗಾಯಗೊಳಿಸಿ, 3 ಮತ್ತು 4ನೇ ಆರೋಪಿತರಾದ ನೀವು ಚಾಸಾ-4 ರವರಿಗೆ ಕೈಯಿಂದ ಹೊಡೆದು ಸಾಮಾನ್ಯ ಗಾಯಪಡಿಸಿದ್ದು ಮತ್ತು 5 ಮತ್ತು 6ನೇ ಆರೋಪಿತರಾದ ನೀವು ಚಾಸಾ-5 ರವರಿಗೆ ಕೈಯಿಂದ ಹೊಡೆದು ಸಾಮಾನ್ಯ ಗಾಯ ಗೊಳಿಸಿದ್ದು, ಆ ಮೂಲಕ

ಆರೋಪಿತರಾದ ನೀವೆಲ್ಲರೂ ಬಿ.ಎನ್.ಎಸ್-2023 ಕಲಂ 115(2) ಸಹ ಕಲಂ 190 ರಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

4. ನಾಲ್ಕನೇಯದಾಗಿ ಮೇಲೆ ಹೇಳಿದ ತಾರೀಖು, ವೇಳೆ, ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪುಕಟ್ಟಿಕೊಂಡು ಬಂದು ಚಾಸಾ-1, 4 ಮತ್ತು 5 ರವರ ಜೊತೆ ಜಗಳ ತೆಗೆದು, ಮಿಂಡ್ರಿ ಮಕ್ಕಳು ಅಂತಾ ಅವಾಚ್ಯ ಶಬ್ದಗಳಿಂದ ಬೈದಾಡಿ ಅವಮಾನಗೊಳಿಸಿದ್ದು, ಆ ಮೂಲಕ ನೀವೆಲ್ಲರೂ ಬಿ.ಎನ್.ಎಸ್-2023 ಕಲಂ 352 ಸಹ ಕಲಂ 190 ರಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

5. ಐದನೇಯದಾಗಿ ಮೇಲೆ ಹೇಳಿದ ತಾರೀಖು, ವೇಳೆ, ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪುಕಟ್ಟಿಕೊಂಡು ಬಂದು ಚಾಸಾ-1, 4 ಮತ್ತು 5 ರವರ ಜೊತೆ ಜಗಳ ತೆಗೆದು, ಅವಾಚ್ಯ ಶಬ್ದಗಳಿಂದ ಬೈದಾಡಿ, ಹೊಡಿ-ಬಡಿ ಮಾಡಿದ್ದಲ್ಲದೇ ಇನ್ನೊಂದು ಸಲಾ ಪಂಚಾಯತಿ ಆಸ್ತಿ ಸಲುವಾಗಿ ಬಂದರೆ ನಿಮ್ಮನ್ನು ಮುಗಿಸದೇ ಬಿಡುವುದಿಲ್ಲಾ ಅಂತಾ ಜೀವದ ಬೆದರಿಕೆ ಹಾಕಿದ್ದು, ಆ ಮೂಲಕ ನೀವೆಲ್ಲರೂ ಬಿ.ಎನ್.ಎಸ್-2023 ಕಲಂ 351(2 ಮತ್ತು 3) ಸಹ ಕಲಂ 190 ರಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

6. ಆರನೇಯದಾಗಿ ಮೇಲೆ ಹೇಳಿದ ತಾರೀಖು, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಲಿಂಗಾಯತ ಜಾತಿಗೆ ಸೇರಿದ್ದು, ಚಾಸಾ-1, 4 ಮತ್ತು 5 ರವರು ಹಿಂದೂ ವಾಲ್ಮೀಕಿ ಪರಿಶಿಷ್ಟ ಪಂಗಡಕ್ಕೆ ಸೇರಿದವರು ಎಂದು ಗೊತ್ತಿದ್ದರೂ ಸಹ ಅವರಿಗೆ

ಸಾರ್ವಜನಿಕವಾಗಿ ಲೇ ಕೀಳು ಜಾತಿ ಮಿಂಡ್ರಿ ಮಕ್ಕಳ, ಲೇ ವಾಲ್ಮೀಕಿ ಜಾತಿಗೆ ಹುಟ್ಟಿದವರೇ ಅಂತಾ ಸಾರ್ವಜನಿಕವಾಗಿ ಜಾತಿ ಎತ್ತಿ ಬೈದಾಡಿ ಪರಿಶಿಷ್ಟ ಪಂಗಡಕ್ಕೆ ಅವಮಾನಪಡಿಸಿದ್ದರಿಂದ ಆ ಮೂಲಕ ಆರೋಪಿತರಾದ ನೀವು SC/ST (POA) ಕಲಂ.3(1)(r) ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ಈ ಮೇಲಿನ ಎಲ್ಲಾ ದೋಷಾರೋಪಣೆಗಳಿಗೆ ನೀವು ಈ ನ್ಯಾಯಾಲಯದಿಂದ ವಿಚಾರಣೆಗೊಳಪಡುತ್ತೀರ.

ದಿನಾಂಕಃ19.12.2025

ಹಾವೇರಿ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು,
ಹಾವೇರಿ